147ನೇ ಅಧಿವೇಶನ, ಕಂಪ್ಯೂಟರ್
ನಿ-72 -117

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ ರವರು ನಿಯಮ-72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಗಮನ ಸೆಳೆಯುವ ಸೂಚನೆ:**

**ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ನಡುವೆ ಜಟಾಪಟಿ, ವಾಕ್ಸಮರ ನಡೆದಿರುವ ಬಗ್ಗೆ ಕೆಲವು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿತ್ತು. ಅದರಲ್ಲಿ ಸದರಿ ನಿಗಮದಲ್ಲಿ ಕೆಲವೊಂದು ಭ್ರಷ್ಟಾಚಾರ ಆರೋಪ ಪ್ರತ್ಯಾರೋಪಗಳು ಕಂಡು ಬಂದಿರುವ ಬಗ್ಗೆ ಚರ್ಚಿಸಲು ನಿಯಮ 72ನೇ ನಿಯಮದಡಿಯಲ್ಲಿ ಸರ್ಕಾರದ ಸಣ್ಣ ಕೈಗಾರಿಕಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

1) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಯವರಾದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸರ್ಕಾರದಿಂದ ನಾಮ ನಿರ್ದೇಶನಗೊಂಡಿರುವ ನಿಗಮದ ಹಿಂದಿನ ಅಧ್ಯಕ್ಷರು ಪರಸ್ಪರ ಒಬ್ಬರಿಗೊಬ್ಬರು ಆಪಾದನೆಗಳನ್ನು ಮಾಡಿ ಸರ್ಕಾರಕ್ಕೆ ದೂರುಗಳನ್ನು ಸಲ್ಲಿಸಿರುತ್ತಾರೆ. ದಿ: 27.05.2022ರ ಈಚೆಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಪತ್ರಗಳಲ್ಲಿ ಹಿಂದಿನ ಅಧ್ಯಕ್ಷರು ನಿಗಮದ ಕೇಂದ್ರ ಕಛೇರಿಯ ಸಿಸಿಟಿವಿ / ಡಿವಿಆರ್ ತಿರುಚಿರುತ್ತಾರೆಂದು, ಬೇನಾಮಿ ಖಾತೆ ತೆರೆದು ನಿಗಮದಿಂದ ವೇತನ ಪಡೆದಿರುತ್ತಾರೆಂದು, ಇನ್ನೋವಾ ಕಾರು ಅಪಘಾತ ಮಾಡಿರುವುದು, ಕ್ರಿಮಿನಲ್ ಪ್ರಕರಣ ಇತ್ಯಾದಿ ಅಪಾದನೆಗಳಿಗೆ ಸಂಬಂಧಿಸಿದಂತೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ನಿಗಮದ ಹಿಂದಿನ ಅಧ್ಯಕ್ಷರ ವಿರುದ್ಧ ಆಪಾದಿಸಿರುತ್ತಾರೆ.

2) ವ್ಯವಸ್ಥಾಪಕ ನಿರ್ದೇಶಕರು ರವರನ್ನು ಕುರಿತಂತೆ ಸೇವಾ ನಿಯಮ ಉಲ್ಲಂಘನೆ, ಪ್ರಚೋದನೆ, ಅಧಿಕಾರ ದುರುಪಯೋಗ, ರೂ.6 ಕೋಟಿಗೂ ಹೆಚ್ಚು ಹಣವನ್ನು ತುಂಡು ಗುತ್ತಿಗೆ ಮೂಲಕ ಟೆಂಡರ್, ಅಧ್ಯಕ್ಷರ ಮತ್ತು ಸಿಬ್ಬಂದಿಯ ಸುಮಾರು 2 ತಿಂಗಳ ವೇತನವನ್ನು ಹಾಗೂ ಇತರೆ ಭತ್ಯೆಯನ್ನು ಪಾವತಿಸದಿರುವುದು, ಅಧಿಕಾರ ದುರುಪಯೋಗ ದುರ್ನಡತೆ ಇತ್ಯಾದಿಯಾಗಿ ಹಿಂದಿನ ನಿಗಮದ ಅಧ್ಯಕ್ಷರು ಆಪಾದಿಸಿದ್ದು, ಸದರಿಯವರನ್ನು ಮಾನನಷ್ಟ ಮೊಕದ್ದಮೆ ಸಂಬಂಧ ಅಭಿಯೋಜನೆಗೊಳಿಸಲು ಸರ್ಕಾರದ ಅನುಮತಿ ಕೋರಿರುತ್ತಾರೆ.

3) ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಈ ಮೇಲ್ಕಂಡ ದೂರುಗಳು ಆಡಳಿತಾತ್ಮಕ ವಿಚಾರಗಳಾಗಿದ್ದು, ಮಾನ್ಯ ಸದಸ್ಯರು ನೀಡಿರುವ ಸೂಚನಾ ಪತ್ರದಲ್ಲಿ ತಿಳಿಸಿರುವಂತೆ ನಿಗಮದಲ್ಲಿ ಭ್ರಷ್ಟಾಚಾರ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ.

4) ಆದಾಗ್ಯೂ, ನಿಗಮದ ಉನ್ನತ ಸ್ಥಾನದಲ್ಲಿ ಇರುವಂತಹ ಹಿಂದಿನ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮಾಡಿರುವ ಪರಸ್ಪರ ಆರೋಪಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಇದರ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ನಿಯಮಾನುಸಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅದರಂತೆ, ನಿಗಮದ ವ್ಯವಸ್ಥಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಯವರ ವಿರುದ್ಧ ನಿಗಮದ ಹಿಂದಿನ ನಾಮ ನಿರ್ದೇಶಿತ ಅಧ್ಯಕ್ಷರು ಮಾಡಿರುವ ಆರೋಪಗಳ ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಗಳ ಸಕ್ಷಮ ಪ್ರಾಧಿಕಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಾಗಿರುವುದರಿಂದ ಸದರಿ ಇಲಾಖೆಯು ಅಗತ್ಯ ಕ್ರಮಕೈಗೊಳ್ಳುವಂತೆ ದೂರರ್ಜಿಗಳನ್ನು ಸಿ.ಆ.ಸು.ಇಲಾಖೆಗೆ ಕಳುಹಿಸಿಕೊಡಲಾಗಿರುತ್ತದೆ.

5) ವ್ಯವಸ್ಥಾಪಕ ನಿರ್ದೇಶಕರು ನಿಗಮದ ಹಿಂದಿನ ಅಧ್ಯಕ್ಷರ ಮೇಲೆ ನೀಡಿರುವ ದೂರುಗಳು ಆಡಳಿತಾತ್ಮಕ ವಿಚಾರಗಳಾಗಿದ್ದು, ನಿಗಮದ ಆರ್ಥಿಕ ವ್ಯವಹಾರ ಮತ್ತು ನಿಗಮದ ಬಹುತೇಕ ಪ್ರಮುಖ ಆಡಳಿತಾತ್ಮಕ ವಿಚಾರಗಳಲ್ಲಿ ಅಧ್ಯಕ್ಷರ ಪಾತ್ರ ಇರುವುದಿಲ್ಲ. ಆದಾಗ್ಯೂ ವ್ಯವಸ್ಥಾಪಕ ನಿರ್ದೇಶಕರು ಹಿಂದಿನ ಅಧ್ಯಕ್ಷರ ವಿರುದ್ಧ ಮಾಡಿರುವ ದೂರಿನಲ್ಲಿ ಆಧಾರ ಸಹಿತ ದೂರಾಗಿದ್ದಲ್ಲಿ ಅವುಗಳನ್ನು ದಾಖಲಾತಿಗಳ ಸಮೇತ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾದಲ್ಲಿ ಸೂಕ್ತ ಪ್ರಾಧಿಕಾರದ ಮುಂದೆ ಅಗತ್ಯವಿದ್ದಲ್ಲಿ ಕ್ರಮ ಜರುಗಿಸಲಾಗುವುದು. ಹಿಂದಿನ ಅಧ್ಯಕ್ಷರನ್ನು ಸರ್ಕಾರ ಈಗಾಗಲೇ ಬದಲಾಯಿಸಿ, ನೂತನ ಅಧ್ಯಕ್ಷರನ್ನು ನೇಮಿಸಲಾಗಿದೆ.

6) ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ನೀಡಿರುವ ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪಿಸಿದಂತೆ ನಿಗಮದಲ್ಲಿ ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರು ಹಾಗೂ ನಿಗಮದ ಹಿಂದಿನ ಅಧ್ಯಕ್ಷರ ನಡುವೆ ವಾಗ್ವಾದ ನಡೆದಿದೆಯೇ ಹೊರತು ಭ್ರಷ್ಟಾಚಾರ ನಡೆದಿರುವ ಬಗ್ಗೆ ಸದ್ಯದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ. ಆದಾಗ್ಯೂ, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ಆಧಾರ ಸಮೇತ ದಾಖಲಾತಿಗಳನ್ನು ಒಳಗೊಂಡ ಭ್ರಷ್ಟಾಚಾರ ಆರೋಪಗಳೇನಾದರೂ ಯಾರಿಂದಾದರೂ ಸ್ವೀಕೃತವಾದಲ್ಲಿ ಅಂತಹ ದೂರುಗಳ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

**ಸಿಐ 246 ಸಿಎಸ್ ಸಿ 2022**

**(ಎನ್. ನಾಗರಾಜು (ಎಂ.ಟಿ.ಬಿ.))**
ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆಗಳ ಸಚಿವರು.